# Vartha Bharati

Date: August 29, 2015 Page No. 04

Edition: Bengaluru Language: Kannada



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ ಸಂಸ್ಥೆಯ ಆಶ್ರಯದಲ್ಲಿ ನಡೆದ ಅಂತರ್ ರಾಷ್ಟ್ರೀಯ ಸಮ್ಮೇಳನವನ್ನು ಹೆಕ್ಸಾಗನ್ ಹೆಲ್ತ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಟಿ. ಶ್ರೀಕಾಂತ್ ಭಾಗವತ್ ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕ ಎನ್. ಆರ್. ಪರಸುರಾಮನ್, ಸಮ್ಮೇಳನ ಅಧ್ಯಕ್ಷ ಡಾ. ಉಲ್ಲಾಸ್ ರಾವ್ ಅವರು ಉಪಸ್ಥಿತರಿದ್ದರು.

## ಸುಸ್ಥಿರ ಆರ್ಥಿಕ ಅಭಿವೃದ್ಧಿ ಅಗತ್ಯ: ಭಾಗವತ್

ಮೈಸೂರು: 10ನೇ ಶತಮಾನದಿಂದಲೂ ಭಾರತ ವಿಶ್ವ ಆರ್ಥ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಇಂದೂ ಭಾರತದಲ್ಲಿ ಆರ್ಥಿಕ ಶಕ್ತಿ ಅಗಾಧವಾಗಿದೆ. ಆದರೆ ಭಾರತ ಸುಸ್ಥಿರವಾದ ಪ್ರಗತಿಗೆ ಹೆಚ್ಚು ಒತ್ತು ನೀಡಬೇಕು ಎಂದು ಹೆಕ್ಸಾಗನ್ ಹೆಲ್ತ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಪ್ರಧಾನ ಸಲಹೆಗಾರರಾದ ಟಿ.ಶ್ರೀಕಾಂತ್ ಭಾಗವತ್ ಹೇಳಿದರು.

ಅವರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್‌ಡೆವಲಪ್‌ಮೆಂಟ್ ಸಂಸ್ಥೆ (ಎಸ್‌ಡಿಎಂಐಎಂಡಿ) ಆಯೋಜಿಸಿದ 'ಗ್ಲೋಬಲ್ ರಿಕವರಿ: ಇಂಡಿಯಾ ಸ್ಟೋರಿ' ವಿಷಯದ ನಾಲ್ಕನೇ ಅಂತರ್ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿ ಮಾತನಾಡುತ್ತಿದ್ದರು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉದ್ಯೋಗ ಪ್ರಮಾಣ ಚೆನ್ನಾಗಿದೆ. ಆರ್ಥಿಕ ಪ್ರಗತಿಯನ್ನು ಸುಸ್ಥಿರವಾಗಿಡಲು ಕಲೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಭಾವವನ್ನು ಪೋಷಿಸಬೇಕು ಎಂದು ಅವರು ನುಡಿದರು.

ಭಾರತದ ವಿವಿಧ ಭಾಗಗಳಿಂದಲ್ಲದೇ ಆಸ್ಟ್ರೇಲಿಯ, ಫ್ರಾನ್ಸ್, ಯುಎಇ, ಬಹ್ರೇನ್, ಇರಾನ್, ಇಥಿಯೋಪಿಯ, ನೈಜೀರಿಯ, ಯೆಮನ್, ಬಾಂಗ್ಲಾದೇಶ ಮತ್ತು ಮಲೇಷ್ಯದ ಪ್ರತಿನಿಧಿಗಳು ಎರಡು ದಿನಗಳ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಆಸ್ಟ್ರೇಲಿಯದ ಬಾಂಡ್‌ಯೂನಿವರ್ಸಿಟಿಯ ಡಾ. ಕುಲದೀಪ್ ಕುಮಾರ್, ಫ್ರಾನ್ಸ್‌ನ ಡಾ. ಅಪ್ಪಾ ಅರವಿಂದ್, ದುಬೈಯ ಬ್ರಿಟಿಷ್ ಯೂನಿವರ್ಸಿಟಿಯ ಡಾ. ಇಳಾಂಗೊ ರಂಗಸ್ವಾಮಿ, ಇರಾನಿನ ಇಸ್ಲಾಮಿನ ಆಜಾದ್ ಯೂನಿವರ್ಸಿಟಿಯ ಡಾ. ಹಮೀದ್ ಸರೇಮಿ ಮತ್ತು ಭಾರತದ ಎಸ್‌ಆರ್‌ಎಂಯೂನಿವರ್ಸಿಟಿಯ ಡಾ.ಎಸ್.ವಸುಮತಿ ಹರಿಹರನ್ ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು. ಎಸ್‌ಡಿ ಎಂಐಎಂಡಿಯ ನಿರ್ದೇಶಕ ಡಾ.ಎನ್. ಆರ್.ಪರಸುರಾಮನ್ ಸ್ವಾಗತಿಸಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಡಾ. ಉಲ್ಲಾಸ್‌ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು.